CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**Spl.C(SC/ST).No.: 2/2020**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 5
ಸಿ.ಡಬ್ಲ್ಯೂ ನಂಃ 5
ಸಾಕ್ಷಿಯನ್ನು ದಿನಾಂಕಃ 05-12-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸೋಮಪ್ಪ |
| ತಂದೆಯ ಹೆಸರು | ಃ | ಅರ್ಜುನಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಕಾತರಕಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಮ್ಮ ಊರು ಕಾತರಕಿ. ಅಲ್ಲಿ ನಾನು ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಪ್ರಾಸಾ 4 ನನ್ನ ಹೆಂಡತಿ. ಆಕೆ ತಿಗರಿ ಗ್ರಾಮದವಳು. 2019 ರಲ್ಲಿ ನಮ್ಮ ಮದುವೆ ನಿಶ್ಚಯವಾಗಿತ್ತು. ಫಕೀರೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಮದುವೆ ಸಮಾರಂಭದಲ್ಲಿ ನಮ್ಮ ಮದುವೆಯನ್ನು ಏರ್ಪಡಿಸಲಾಗಿತ್ತು. ನಮ್ಮ ಹಿರಿಯರು ಆ ದೇವಸ್ಥಾನದಲ್ಲಿ ಮದುವೆ ಮಾಡಬೇಕೆಂದು ನಿಶ್ಚಯ ಮಾಡಿದ್ದರು. ದಿಃ 27-8-2019 ರಂದು ನನ್ನ ಹಾಗೂ ಚಾಸಾ 4 ರವರ ಮದುವೆ ಅಂಬೇಡ್ಕರ ಭವನದಲ್ಲಿ ಆಯಿತು. ಒಟ್ಟು 4 ಜೋಡಿಗಳ ಮದುವೆ ಆಯಿತು. ನಮ್ಮದು ಕೀಳು ಜಾತಿ ಎಂದು ಹೇಳಿ ಅಂಬೇಡ್ಕರ ಭವನದಲ್ಲಿ ಮದುವೆ ಮಾಡಲಾಯಿತು. ತಾಳಿಯನ್ನು ಅಂಬೇಡ್ಕರ ಭವನದಲ್ಲಿ ಕಟ್ಟಿ ಊಟ ಬೇಕಾದರೆ ಫಕಿರೇಶ್ವರ ದೇವಸ್ಥಾನದಲ್ಲಿ ಮಾಡಿಕೊಳ್ಳಿ ಎಂದು ಹೇಳಿದರು. ಆ ನಂತರ ತಾಳಿ ಇಲ್ಲಿ ಯಾಕೆ ಕಟ್ಟಿಸಿದ್ದು ಎಂದು ನಮ್ಮವರು ಹಾಗೂ ಅವರು ಬೈಯ್ದಾಡಿಕೊಂಡರು.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

2). ನನ್ನ ಹೆಂಡತಿ ಕಡೆಯವರು ರೊಕ್ಕ ಕೊಟ್ಟು ರಸೀದಿ ಪಡೆದುಕೊಂಡಿದ್ದರು ಎಂದರೆ ಸರಿ. ನೋಂದಣಿ ಮಾಡಿಸಿದ 4 ಮಾದಿಗ ಸಮುದಾಯದವರು ದೇವಸ್ಥಾನದ ಬಳಿ ಮದುವೆ ಮಾಡಿಕೊಳ್ಳುವಂತಿಲ್ಲ ಎಂದು ಹೇಳಿದರು ಎಂದರೆ ಸರಿ. ನಮ್ಮ ಮದುವೆ 11 ಗಂಟೆಗೆ ಆಯಿತು ಎಂದರೆ ಸರಿ. ಮಧ್ಯಾಹ್ನ 12 ಗಂಟೆಗೆ ಫಕೀರೇಶ್ವರ ದೇವಸ್ಥಾನದ ಸಮಿತಿಯವರು ಅಂಬೇಡ್ಕರ ಭವನದ ಬಳಿ ಬಂದಾಗ ನಮ್ಮ ಜಾತಿಯ

ಮುಖಂಡರು ಅವರನ್ನು ಪ್ರಶ್ನೆ ಮಾಡಿದರು ಎಂದರೆ ಸರಿ. ಆ ಸಮಯ ದೇವಸ್ಥಾನ ಸಮೀತಿಯವರು ನಮ್ಮವರನ್ನು ತಡೆದು ಬೈಯ್ದು ಜೀವದ ಬೆದರಿಕೆ ಹಾಕಿದರು ಎಂದರೆ ಸರಿ. ನಮ್ಮ ಜಾತಿಗೆ ಸೇರಿದ 4 ವಧು ವರರಿಗೆ ಬೇರೆ ಕಡೆ ಮದುವೆ ಮಾಡಿಸಿ ಅಸ್ಪೃಷ್ಯತೆ ಆಚರಣೆ ಮಾಡಿರುತ್ತಾರೆ ಎಂಬ ವಿಚಾರದಲ್ಲಿ ದೂರು ಕೊಡಲಾಗಿತ್ತು ಎಂದರೆ ಸರಿ. ದೇವಸ್ಥಾನದ ಸಮೀತಿಯವರು ಈ ಕೇಸಿನ ಆರೋಪಿಗಳು ಎಂದರೆ ಸರಿ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಮಾಡಿಕೊಂಡಿದ್ದಾರೆಂದರೆ ಸರಿ.

ಪಾಟೀ ಸವಾಲು : ಆರೋಪಿತರ ಪರ ಶ್ರೀ ವೈಜೆಆರ್ ವಕೀಲರಿಂದ

3). ಯಾವ ದಿನಾಂಕದಂದು ನನ್ನ ಹಾಗೂ ಚಾಸಾ 4ರ ಮದುವೆ ನಿಶ್ಚಯವಾಗಿತ್ತು ಎಂದು ಗೊತ್ತಿಲ್ಲ. ನಮ್ಮ ಮದುವೆ ಮಾತುಕತೆಯಾದ ವಿಚಾರ ನನಗೆ ಗೊತ್ತಿದೆ. ಆ ಮಾತುಕತೆ ತಿಗರಿ ಗ್ರಾಮದಲ್ಲಿ ಆಯಿತು. ನನ್ನ ವಯಸ್ಸಿನ ಬಗ್ಗೆ ಹಾಗೂ ಮದುವೆ ಆಗಿಲ್ಲ ಎಂದು ಪಂಚಾಯತಿಯಿಂದ ದೃಢೀಕರಣ ಪಡೆದು ದೇವಸ್ಥಾನದ ಕಮೀಟಿಯವರಿಗೆ ಕೊಡಲಾಯಿತು. ನಮ್ಮ ತಂದೆಯವರು ಆ ದಾಖಲೆಯನ್ನು ಕೊಟ್ಟಿದ್ದಾರೆ. ಆದರೆ ಯಾರಿಗೆ ಕೊಟ್ಟರು ಎಂದು ಗೊತ್ತಿಲ್ಲ. ಆ ದೇವಸ್ಥಾನದವರು ಕೊಟ್ಟ ರಸೀದಿಯನ್ನು ಪೊಲೀಸರಿಗೆ ಕೊಟ್ಟಿದ್ದಾರೋ ಇಲ್ಲವೋ ನನಗೆ ಸರಿಯಾಗಿ ಗೊತ್ತಿಲ್ಲ.

4). ಮದುವೆ ದಿನ ಬೆಳಿಗ್ಗೆ 7 ರಿಂದ 7-30 ಗಂಟೆಗೆ ನಾವು ತಿಗರಿ ಗ್ರಾಮಕ್ಕೆ ಹೋದೆವು. ನಾವು ಚಾಸಾ 4 ರ ಮನೆಯಲ್ಲಿಯೇ ವಿಶ್ರಾಂತಿ ಪಡೆದೆವು. ಅವರ ಮನೆಯ ಪಕ್ಕದಲ್ಲಿಯೇ ಅಂಬೇಡ್ಕರ ಭವನ ಹಾಗೂ ಸಾರಿ ದುರುಗಮ್ಮನ ದೇವಸ್ಥಾನ ಇವೆ. ಸದರಿ ದೇವಸ್ಥಾನ ಮತ್ತು ಅಂಬೇಡ್ಕರ ಭವನದಲ್ಲೆನಮ್ಮ ಸಮುದಾಯದ ಮದುವೆಗಳು ನಡೆಯುತ್ತವೆ ಎಂದರೆ ಸರಿ. ನಮ್ಮ ಮದುವೆ ಅಂಬೇಡ್ಕರ ಭವನದಲ್ಲಿ ಆಯಿತು. ನಾನು ಕಾತರಕಿ ಗ್ರಾಮದನವನಾದ ಕಾರಣ ತಿಗರಿಯ ಫಕಿರೇಶ್ವರ ದೇವಸ್ಥಾನದ ಸಮೀತಿಯ ಸದಸ್ಯರು ಯಾರು ಎಂದು ಗೊತ್ತಿಲ್ಲ ಎಂದರೆ ಸರಿ. ಯಾರು ಯಾರನ್ನು ಬೇಟಿಯಾದರು ಎಂದು ನಾನು ಕಣ್ಣಾರೆ ನೋಡಿರಲಿಲ್ಲ. ಯಾರು ಯಾರನ್ನು ಬೈಯ್ದರು ಮತ್ತು ಯಾರು ಜೀವದ ಬೆದರಿಕೆ ಹಾಕಿದರು ಎಂದು ನಾನು ನೋಡಲಿಲ್ಲ. ಈ ಕೇಸಿನ ವಿಚಾರದಲ್ಲಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ. ನಮ್ಮ ಸಮುದಾಯದ ಭವನದಲ್ಲೆ ನಾವು ಮದುವೆ

ಮಾಡಿಕೊಂಡಿದ್ದರೂ ವಿನಾ ಕಾರಣ ಆರೋಪಿಗಳು ಬೈಯ್ದರು ಮತ್ತು ಜೀವದ ಬೆದರಿಕೆ ಹಾಕಿದರು ಎಂದು ಪೊಲೀಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ